**ದಿನಾಂಕಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನಗೆ 29 ನೇ ಸೈಟಿನ ಆಸ್ತಿಯು ಸರ್ಕಾರದಿಂದ ಬಂದ ಸ್ವತ್ತಾಗಿರುತ್ತದೆ. ಈ ಸಂಬಂಧ ಹಕ್ಕುಪತ್ರವಿದ್ದು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ 29ನೇ ಸೈಟಿನ ನಂತರ 30 ಹಾಗೂ 31 ಇರುತ್ತದೆಂದರೆ ಸರಿ. ನನ್ನ ಹೆಂಡತಿ ಸೈಟ್ ನಂ.31 ಇದನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ 31 ರ ಸೈಟನ್ನು ವಾದಿಗೆ ಮಾರಾಟ ಮಾಡಿರುವುದಾಗಿ ದಾವೆಯಲ್ಲಿ ಹೇಳಿರುತ್ತಾರೆಂದರೆ ಸರಿ. ನಾನು ದಾವೆಯ ಅಂಶಗಳನ್ನು ಓದಿರುವುದಿಲ್ಲ. ಸದರಿ 31ನೇ ಸೈಟು ವಾದಿಯ ಹೆಸರಿನಲ್ಲಿ ಖಾತೆಯಾಗಿದೆ ಎಂದು ದಾಖಲಾತಿ ನೀಡಿರುತ್ತಾರೆಂದರೆ ಸರಿ. ಅದರ ಪಶ್ಚಿಮ ಭಾಗಕ್ಕೆ ಚಂದ್ರೇಗೌಡ ಎಂದು ತೋರಿಸಿದ್ದು ಸದರಿ ಚಂದ್ರೇಗೌಡ ಯಾರು ಎಂದರೆ ಸಾಕ್ಷಿಯು ಅದು ನಾನು ಎಂದು ನುಡಿಯುತ್ತಾರೆ.

2. ಪ್ರತಿವಾದಿಯು ಎಷ್ಟು ವರ್ಷಗಳಿಂದ ಗೊತ್ತು ಎಂದರೆ ಅವರು ಅಲ್ಲೇ ಪಕ್ಕದವರು ಎಂದು ನುಡಿಯುತ್ತಾರೆ. ಸಾಕ್ಷಿಯು ಪಕ್ಕದಲ್ಲಿ ಛತ್ರ ಇದ್ದು ಅಲ್ಲಿ ಇದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ ಸೈಟು ನಂ.30 ರಲ್ಲಿ ಪಾಯ ಹಾಕಿಕೊಂಡು ಗುಡಿಸಲು ಕಟ್ಟಿದ್ದರು ಎಂದರೆ ಸಾಕ್ಷಿಯು 31 ರಲ್ಲಿ ಪಾಯ ಹಾಕಿದ್ದರು ಆಗ ಸೈಟಿನ ಮಾಲೀಕರಾದ ಚಂದ್ರಮ್ಮರವರು ಬಂದು ಊರಿನ ಮುಖಂಡರನ್ನು ಸೇರಿಸಿ ಸದರಿಯವರಿಗೆ 6 ಸಾವಿರ ಪರಿಹಾರ ಕೊಟ್ಟು ಅವರ ಕೈಯಲ್ಲಿ ಸಹಿ ಹಾಕಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾವಿತ್ರಮ್ಮ ರವರು ಚಂದ್ರಮ್ಮರವರಿಗೆ ಈ ಸಂಬಂಧ ಬರೆದುಕೊಟ್ಟ ಪತ್ರವನ್ನು ನನ್ನ ಹೆಂಡತಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಪಡೆದುಕೊಂಡಿರುತ್ತಾರೆ. ನಾವು ಸದರಿ ಪತ್ರವನ್ನು ಪ್ರಸ್ತುತ ವಾದಿಗೆ ಕೊಟ್ಟಿರುತ್ತೇವೆ. ಪ್ರತಿವಾದಿಯು ಯಾರಿಗೂ ಯಾವುದೇ ಪತ್ರವನ್ನು ಬರೆದುಕೊಟ್ಟು ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ರೀತಿ ಚಂದ್ರಮ್ಮ ರವರು ಸಾವಿತ್ರಮ್ಮ ರವರ ಕಡೆಯಿಂದ ಪತ್ರ ಬರೆಸಿಕೊಂಡಿರುವ ವಿಚಾರವಾಗಿ ಅವರ ಕ್ರಯಪತ್ರದಲ್ಲಿ ಆಗಲೀ ಅಥವಾ ನಮಗೆ ಮಾಡಿಕೊಟ್ಟ ಕ್ರಯಪತ್ರದಲ್ಲಿ ಬರೆಸಿರುವುದಿಲ್ಲ.

ಈ ರೀತಿ ಸ್ವಾಧೀನವನ್ನು ಪಡೆದುಕೊಂಡಿದ್ದರು ಎಂಬುದಾಗಿ ಹಾಗೂ ಈ ಸಂಬಂಧ ಪತ್ರ ಕೊಟ್ಟಿರುವ ವಿಚಾರವನ್ನು ಕ್ರಯಪತ್ರದಲ್ಲಿ ಬರೆಸಲು ಯಾವುದೇ ತಕರಾರು ಇರುವುದಿಲ್ಲ. ಚಂದ್ರಮ್ಮ ರವರು ಪ್ರತಿವಾದಿಯ ವಿರುದ್ದ ಸ್ವಾಧೀನದ ಸಂಬಂಧ ಪೋಲೀಸ್ ಠಾಣೆಗಾಗಲೀ ಅಥವಾ ಯಾವುದೇ ನ್ಯಾಯಾಲಯದಲ್ಲಿ ದಾವೆಯಾಗಲೀ ಹಾಕಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯು ಕಾನೂನುಬದ್ದ ರೀತಿಯಲ್ಲಿ ಚಂದ್ರಮ್ಮರವರಿಗೆ ಯಾವುದೇ ಸ್ವಾಧೀನಾನುಭವನವನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ.

3. ಆ ಕಾಲಕ್ಕೆ ಪಾಯ ಹಾಕಿಸುವ ಕೆಲಸವೂ ಸುಮಾರು 15 ದಿನಗಳ ಕಾಲಾವಧಿಯನ್ನು ಪಡೆದುಕೊಳ್ಳುತ್ತಿತ್ತು ಎಂದರೆ ಸರಿ. ಅದೇ ರೀತಿ ಸದರಿ ಪಾಯ ಸಮತೋಲನ ಮಾಡಿ ಅದು ಒಣಗಲು ಹಾಗೂ ಸರಿಯಾಗಿ ಕೂರಲು ಸುಮಾರು 1 ವಾರದ ಅವಧಿ ಬೇಕಾಗುತ್ತದೆಂದರೆ ಸರಿ. ಅದೇ ರೀತಿ ಪಾಯದ ಕಟ್ಟಡ ಕಟ್ಟಬೇಕಾದರೆ ಹಾಗೂ ಪ್ಲಾಸ್ಟಿಂಗ್ ಮಾಡಬೇಕಾದರೆ ಸುಮಾರು 1 ರಿಂದ ಒಂದುವರೆ ತಿಂಗಳು ಬೇಕಾಗುತ್ತದೆಂದರೆ ಸರಿ. ಪಾಯ ಹಾಕುವಾಗ ಹಾಗೂ ಅದನ್ನು ಸಮದಟ್ಟು ಮಾಡುವಾಗ ನಂತರದಲ್ಲಿ ಪ್ಲಾಸ್ಟಿಂಗ್ ಮಾಡುವ ಸಮಯದಲ್ಲೂ ಸಹಿತ ಯಾರು ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ನಂತರದಲ್ಲಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನಾವು ಕ್ರಯಕ್ಕೆ ಪಡೆಯುವಾಗ ಸದರಿ ಪಾಯ ಇತ್ತು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ 5 ರಿಂದ 6 ಅಡಿಗಳ ಶೀಟಿನ ಮನೆಯನ್ನು ಕಟ್ಟಬೇಕಾದರೆ ಸರಿ ಸುಮಾರು 2 ರಿಂದ 3 ತಿಂಗಳು ಕಾಲಾವಕಾಶ ಬೇಕೆಂದರೆ ಸರಿ. ಪ್ರತಿವಾದಿಯು ಶೀಟಿನ ಮನೆ ಕಟ್ಟಿಕೊಂಡು ವಾಸವಿದ್ದಾರೆಂದರೆ ಹೌದು ಅವರು ಬಂದು ಸೇರಿಕೊಂಡಿದ್ದಾರೆಂದು ನುಡಿಯುತ್ತಾರೆ. ಮನೆ ಕಟ್ಟುವ ಸಂದರ್ಭದಲ್ಲಿ ಪೋಲೀಸರಿಗೆ ಈ ಸಂಬಂಧ ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ.

4. ವಾದಿಗೆ ನಮ್ಮ ಊರಿನಲ್ಲಿ ಸುಮಾರು ಜನರ ಪರಿಚಯವಿದ್ದಾರೆಂದರೆ ಸರಿಯಲ್ಲ ಅವರು ಬೆಂಗಳೂರಿನವರು ಎಂದು ನುಡಿಯುತ್ತಾರೆ. ಸದರಿಯವರು ಜಾಗವನ್ನು ಖರೀದಿ

ಮಾಡಿದ ನಂತರ ಒಂದು ತಿಂಗಳಿಗೊಮ್ಮೆ ಬರುತ್ತಿದ್ದರು ಅವರು ಯಾರೊಟ್ಟಿಗೆ ಮಾತನಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರಿದ ವಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**